**MVC: 940/2024**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 15.04.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದ</u>**

ನನ್ನ ಹೆಸರಿನಲ್ಲಿ ಮಳೆ ಆಶ್ರಿತ ಕೃಷಿ ಜಮೀನು ಇದೆ. ನಾನು ವರ್ಷಕ್ಕೆ ಒಂದು ಬೆಳೆ ಬೆಳೆಯುತ್ತೇನೆ. ಒಂದು ಎಕರೆಗೆ 20 ಕ್ವಿಂಟಲ್ ಮೆಕ್ಕೆಜೋಳ ಬೆಳೆಯುತ್ತೇನೆ. 2020 ರಲ್ಲಿ ಮೆಕ್ಕೆಜೋಳ ಪ್ರತೀ ಕ್ವಿಂಟಲ್ ಗೆ ರೂ. 1,200/- ಬೆಲೆ ಇತ್ತು. ಈ ವರ್ಷ ಆಳುಗಳ ಸಹಾಯದಿಂದ 32 ಕ್ವಿಂಟಾಲ್ ಮೆಕ್ಕೆಜೋಳ ಬೆಳೆದಿರುತ್ತೇನೆ. ಮೊದಲು ಹೇಗೆ ವ್ಯವಸಾಯ ಮಾಡುತ್ತಿದ್ದೆ ಈಗಲೂ ಅದೇ ರೀತಿ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಸರಿ. ಅಪಘಾತವು ವಾಹನಗಳ ಮುಖಾಮುಖಿ ಡಿಕ್ಕಿಯಿಂದ ಆಗಿರುತ್ತದೆ. ಅಪಘಾತವಾದ ಸ್ಥಳದ ರಸ್ತೆ 60 ಅಡಿ ಅಗಲದ ರಸ್ತೆ ಆಗಿರುತ್ತದೆ. ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಉಜ್ಜಿನಿಯಿಂದ ಕೊಟ್ಟೂರಿಗೆ ಬರುವ ರಸ್ತೆಯ ಎಡಭಾಗದಲ್ಲಿ ಅಪಘಾತವಾಗಿರುತ್ತದೆ. ನಾನು ಹಾಕಿರುವ ನಿ.ಪಿ 5 ರ ಪ್ರಕಾರ ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿಯಲ್ಲ. ಆ ದಿನ ಕಾರ್ ನಿಧಾನವಾಗಿ ಬರುತ್ತಿತ್ತು ನಾನೇ ನನ್ನ ಬೈಕ್ ನಿಯಂತ್ರಣ ತಪ್ಪಿ ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಕಾಲಕ್ಕೆ ನನಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಉಜ್ಜಿನಿ, ಕೊಟ್ಟೂರು, ದಾವಣಗೆರೆ ಮತ್ತು ಹೊಸಪೇಟೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಿ.ಪಿ 9 ರ ದಾಖಲೆಯನ್ನು ಪಡೆಯುವ ಕಾಲಕ್ಕೆ ಹೊಸಪೇಟೆ ಆಸ್ಪತ್ರೆಗೆ ಹೋಗಿದ್ದೆ. ನಾನು ಉಜ್ಜಿನಿ, ಕೊಟ್ಟೂರು, ದಾವಣಗೆರೆ ಆಸ್ಪೆತ್ರೆಗಳಲ್ಲಿ ಅಂಗನ್ಯೂನತೆ ಪ್ರಮಾಣ ಪತ್ರ ನೀಡುವಂತೆ ಕೇಳಿರುತ್ತೇನೆ. ನಾನು ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೀಡುವಂತೆ ಸದರಿ ಆಸ್ಪತ್ರೆಗಳ ವೈದ್ಯರನ್ನು ಕೇಳಲಾಗಿ ಅವರು ನೀಡಲು ಬರುವುದಿಲ್ಲ ಎಂದು ಹೇಳಿದ್ದರಿಂದ ನಾನು ಹೊಸಪೇಟೆಯಲ್ಲಿ ನಿ.ಪಿ 9 ನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಈಗ 55 ವರ್ಷ ವಯಸ್ಸು ಆಗಿದೆ. ನನಗೆ ತಿಂಗಳಿಗೆ ರೂ. 20 ಸಾವಿರ ಆದಾಯ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಇದೇ ನ್ಯಾಯಾಲಯದಲ್ಲಿ ಈ ಹಿಂದೆ ಎಂ.ವಿ.ಸಿ ನಂಃ 393/2023 ರಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಆ ಅರ್ಜಿಯನ್ನು ವಾಪಾಸ್ ಪಡೆದು ಈ ಅರ್ಜಿ ಹಾಕಿರುತ್ತೇನೆ ಎಂದರೆ ಸರಿ. ಹೆಚ್ಚಿನ ಪರಿಹಾರ ಕೋರಿ ಸುಳ್ಳು ಅರ್ಜಿ

ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ಯಾವುದೇ ತಪ್ಪು ಇಲ್ಲದೆ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**